## ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಗಾಯತ್ರಿನಗರ ವಾರ್ಡ್-76ರಲ್ಲಿ ದಿನಾಂಕ: 20-02-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ

## ಸಭಾ ನಡವಳಿಗಳು.

**ವಾರ್ಡ್ ಸಂಖ್ಯೆ-76 ಗಾಯತ್ರಿನಗರ** **ಸಮಯ ಬೆಳಿಗ್ಗೆ 11:00 ಘಂಟೆಗೆ**

ದಿನಾಂಕ: 20-02-2021ರಂದು ವಾರ್ಡ್ ಸಂಖ್ಯೆ: 76ರ ಫೆಬ್ರವರಿ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 76ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಯಕೊಂಡು ಸಭೆ ನಡೆಸಲು ಕೋರಿದರು.

**ಸಭೆಗೆ ಹಾಜರಿದ್ದವರು:**

| | |
|---|---|
| 1 | ಶ್ರೀ ಚಂದ್ರಶೇಖರ್. ಹೆಚ್.ಆರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್-76ಗಾಯತ್ರಿನಗರ |
| 2 | ಶ್ರೀ ಚಿಕ್ಕಗೂಳಿಗೌಡ.ಜೆ.ಜಿ, ಸಹಾಯಕ ಅಭಿಯಂತರರು, ವಾರ್ಡ್-76ಗಾಯತ್ರಿನಗರ ಹಾಗೂ ಕಾರ್ಯದರ್ಶಿ |
| 3 | ಶ್ರೀ ಕನಕರಾಜು, ಕಂದಾಯ ಪರಿವೀಕ್ಷಕರು |
| 4 | ಶ್ರೀ ಕೆ ಗೋವಿಂದರಾಜು, ಸ್ಯಾನಿಟರಿ ದಫೇದರ್, ಬಿಬಿಎಂಪಿ |
| 5 | ಡಾ॥ ಅಂಜನಾ, ಆರೋಗ್ಯ ಅಧಿಕಾರಿ |
| 6 | ಶ್ರೀ ಆರ್.ಸಂತೋಷ್, ಕೆಲಸ ಪರಿವೀಕ್ಷಕರು |
| 7 | ಶ್ರೀ ಪಿ.ವೆಂಕಟೇಶ್, ಎಲೆಕ್ಟ್ರೀಕಲ್ ಗುತ್ತಿಗೆದಾರರು |
| 8 | ಶ್ರೀ ಮಂಜುನಾಥ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 9 | ಶ್ರೀ ಪ್ರದೀಪ್, ಮೇಲ್ವಿಚಾರಕರು |
| 10 | ಶ್ರೀ ರಂಗನಾಥ್, ಬೆಸ್ಕಾಂ, ಜೆ.ಇ |
| 11 | ಶ್ರೀ ಸಿದ್ದರಾಜು, ಬಿ.ಡಬ್ಲ್ಯೂಎಸ್‌ಎಸ್‌ಬಿ |
| 12 | ಶ್ರೀ ಕೊಂಡಯ್ಯ, ಆರೋಗ್ಯ ಪರಿವೀಕ್ಷಕರು |
| 13 | ಶ್ರೀ ಹರೀಶ್, ಮಾರ್ಷಲ್ |

Scanned with CamScanner

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ ಚಂದ್ರಶೇಖರ್.ಹೆಚ್.ಆರ್ ನೋಡಲ್ ಅಧಿಕಾರಿಗಳು ವಾರ್ಡ್-76 ಇವರು ಸಭೆಯನ್ನು ಮುಂದುವರೆಸಲು ಸೂಚಿಸಿದರು.

**ಆರೋಗ್ಯ ಇಲಾಖೆ (ಘನತ್ಯಾಜ್ಯ):**

- ಸಭೆಯಲ್ಲಿ ಹಾಜರಿದ್ದ ಆರೋಗ್ಯ ಇಲಾಖೆಯ ಅಧಿಕಾರಿಗಳು ಪ್ರತಿದಿನ ಮನೆ ಮನೆಗಳಿಂದ ಘನತ್ಯಾಜ್ಯ ಶೇಖರಣೆಯನ್ನು ಮಾಡಲಾಗುತ್ತದೆ ಎಂದು ತಿಳಿಸಿದರು.

**ಮಾಸ್ಕ್**

- ವಾರ್ಡ್‌ನ ಮಾರ್ಷಲ್‌ಗಳು ಕಾರ್ಯನಿರ್ವಹಣೆಗೆ ಮೆಚ್ಚಿಗೆ ವ್ಯಕ್ತಪಡಿಸುತ್ತಾ, ರೈಲ್ವೆ ಪ್ಯಾರಲೆಲ್ ರೋಡ್‌ನಲ್ಲಿ ಕಸವನ್ನು ತಂದು ಬಿಸಾಕುತ್ತಿರುವುದರಿಂದ ದಂಡ ವಿಧಿಸಿ ಎಚ್ಚರಿಕೆ ನೀಡುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಕಂದಾಯ ಇಲಾಖೆ**

- ಕಂದಾಯ ಇಲಾಖೆಯ ಅಧಿಕಾರಿಯವರು ಈವಿವರೆವಿಗೂ 332.34 ಲಕ್ಷಗಳು ವಸೂಲಿಯಾಗಿದ್ದು, ಬಾಕಿ ರೂ. 76.97 ಲಕ್ಷಗಳು ವಸೂಲಿಯಾಗಬೇಕಾಗಿರುತ್ತದೆ ಎಂದು ತಿಳಿಸಿದರು. ಅತೀ ಜರೂರಾಗಿ ಕಂದಾಯ ವಸೂಲಿ ಮಾಡುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಬೀದಿ ದೀಪವಿಭಾಗ**

- ಬೀದಿ ದೀಪವಿಭಾಗದಿಂದ ಯಾವುದೇ ದೂರುಗಳಿಲ್ಲವೆಂದು ಸಭೆಯಲ್ಲಿ ತಿಳಿಸಿದರು.

**ಬಿಬಿಎಂಪಿ ಕಾಮಗಾರಿ ವಿಭಾಗ**

- ರಸ್ತೆ ಗುಂಡಿಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮಕೈಗೊಂಳ್ಳುವಂತೆ ಸೂಚಿಸಲಾಯಿತು.

Scanned with CamScanner

**ಆರೋಗ್ಯ ಇಲಾಖೆ:**

- ಸಭೆಯಲ್ಲಿ ಹಾಜರಿದ್ದ, ಆರೋಗ್ಯ ಅಧಿಕಾರಿಗಳು ಕೋವಿಡ್-19 ಪರೀಕ್ಷೆಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು ಪೌರಕಾರ್ಮಿಕರಿಗೆ ವ್ಯಾಕ್ಸಿನ್ ನೀಡಲಾಗುತ್ತಿದೆಯೆಂದು ಸಭೆಯಲ್ಲಿ ತಿಳಿಸಿದರು. ಹಾಗೂ 50 ವರ್ಷಗಳ ಮೇಲ್ಪಟ್ಟವರಿಗೆ ವ್ಯಾಕ್ಸಿನ್ ನೀಡಲು ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು ವಾರ್ಡ್-76ರಲ್ಲಿ ಮನೆ ಮನೆಗೆ ತೆರಳಿ ಸರ್ವೆ ನಡೆಸಬೇಕೆಂದು ವೈದ್ಯಾಧಿಕಾರಿಗಳು ತಿಳಿಸಿದರು. ಸ್ಕೂಲ್ ಕಾಲೇಜ್ ವಿದ್ಯಾರ್ಥಿಗಳಿಗೆ ಹೆಚ್ಚಾಗಿ ಪರೀಕ್ಷೆ ನಡೆಸುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಬಿಡ್ಲ್ಯೂಎಸ್ಎಸ್‌ಬಿ ಇಲಾಖೆ:**

- ಬಿಡ್ಲ್ಯೂಎಸ್ಎಸ್‌ಬಿಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ, ಸದರಿಯವರಿಗೆ ರೋಡ್ ಕಟ್ಟಿಂಗ್ ಮಾಡುವಾಗ ವಾರ್ಡ್‌ನ ಇಂಜಿನಿಯರ್ ರವರ ಗಮನಕ್ಕೆ ತಂದು ರೋಡ್ ಕಟ್ಟಿಂಗ್ ಮಾಡುವಂತೆ ಹಾಗೂ ರೋಡ್ ಕಟ್ಟಿಂಗ್ ರಿಸ್ಟೋರೇಷನ್ ಮಾಡುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಬೆಸ್ಕಾಂ ವಿಭಾಗ**

- ಸಭೆಯಲ್ಲಿ ಹಾಜರಿದ್ದ,ಬೆಸ್ಕಾಂ ಅಧಿಕಾರಿಗಳು ಯಾವುದೇ ದೂರುಗಳಿಲ್ಲವೆಂದು ಸಭೆಯಲ್ಲಿ ತಿಳಿಸಿದರು.

**ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

**ಅಧ್ಯಕ್ಷರು**
**ನೋಡಲ್ ಅಧಿಕಾರಿಗಳು, ವಾರ್ಡ್-76**

**ಕಾರ್ಯದರ್ಶಿ,**
**ಸಹಾಯಕ ಅಭಿಯಂತರರು, ವಾರ್ಡ್-76**
**ಗಾಯತ್ರಿನಗರ, ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ**

Scanned with CamScanner